# ತೋಟದಲ್ಲಿ

## ಮತ್ತಾಯ 26:30, 36-46; ಮಾರ್ಕ 14:26, 32-42; ಲೂಕ 22:39-46; ಯೋಹಾನ 18:1, 4, 11,

## ಒಂದು ನಿಕಟ ನೋಟ

ಬಿಡುಗಡೆಯ ವೃತ್ತಾಂತದಲ್ಲಿ ತೋಟದ ಮಹತ್ವದ ಹೆಣಿಗೆಯ ದೊಡ್ಡಪಾತ್ರವಹಿಸುತ್ತದೆ: ಏದೆನ್ ತೋಟದಲ್ಲಿ ಪಾಪದ ತೋಟವಾಗಿ ನಾವು ಕಂಡುಕೊಳ್ಳುತ್ತೇವೆ (ಆದಿಕಾಂಡ 2:8, 17; 3); ಗೆತ್ಸೆಮನೆ ತೋಟವು ಯಾತನೆಯ ತೋಟವಾಗಿದೆ (ಯೋಹಾನ 18:1; ಮತ್ತಾಯ 26:36); ಯೇಸುವನ್ನು ಸಮಾಧಿ ಮಾಡಿದ ಮತ್ತು ಆತನು ಎದ್ದಂಥ ಹೆಸರಿಲ್ಲದ ತೋಟ, ನಿರೀಕ್ಷೆಯ ತೋಟ (ಯೋಹಾನ 19:41, 42; 20); ಮತ್ತು ಪರದೈಸು,[1] ಬಹುಮಾನದ ತೋಟ (ನೋಡಿರಿ ಪ್ರಕಟಣೆ 2:7). ಈ ಪ್ರಸಂಗವು ಇವುಗಳಲ್ಲಿ ಎರಡನೆಯದಾದ ಗೆತ್ಸೆಮನೆಯ ತೋಟದ ಮೇಲೆ ಇರುವುದಾಗಿದೆ.

ನಾವು ಗೆತ್ಸೆಮನೆಯ ಬಗೆಗೆ ಅಭ್ಯಾಸಿಸುತ್ತಿದ್ದಂತೆಯೇ, ಪರಿಶುದ್ಧ ನೆಲದ ನಾವು ನಿಂತಿರುವ ಭಾವನೆಯು ಬಂದು ನಮ್ಮ ಚಪ್ಪಲಿಗಳನ್ನು ಕಳಚುವಂತೆ ಪ್ರೇರಣೆಗೆ ಒತ್ತು ಕೊಡುವುದಾಗಿದೆ (ನೋಡಿರಿ ವಿಮೋಚನಕಾಂಡ 3:5). D. W. Ford ರವರು ನನ್ನ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ:

> [ಈ ಪ್ರಸಂಗವನ್ನು ಬೋಧಿಸುವಂಥ] ವ್ಯಕ್ತಿಯು ನಾನಗಿದ್ದುದಾದರೆ ಎಂದು ನನಗೆ ಸಂಶಯವಿದೆ. ಬಲು ಚಾಲನೆಯಲ್ಲಿರುವ ... ಸುವಾರ್ತೆಯ ಎಲ್ಲಾ ದಾಖಲೆಯನ್ನು ಚಿತ್ರಿಸುವ ಮಾತಿನ ಕೌಶಲ್ಯವನ್ನು, ಆತ್ಮೀಕ ಅರಿವನ್ನು ಅಥವಾ ದೈವೀಕ ಅಂತರ್ಯವನ್ನು ನಾನು ಹೊಂದಿದ್ದೇನೆಯೇ ಎಂಹ ಸಂಶಯ ನನಗಿದೆ ... ಆದರೆ ನಾನೇನು ಮಾಡಬಲ್ಲೆ? ಇದು ಇಲ್ಲಿದೆ, ಮತ್ತು ಬೇರೆಲ್ಲೆಯೂ ಇಲ್ಲ. ಯೇಸು ಕ್ರಿಸ್ತನೆಂಬ ವ್ಯಕ್ತಿಯ ಸಮೀಪಕ್ಕೆ ನಾವು ಬರುತ್ತೇವೆ ನಾನು ಗೆತ್ಸೆಮನೆಯನ್ನು ಬಿಟ್ಟಿದ್ದಾದರೆ, ಯೇಸು ಹೇಗಿದ್ದಾನೆ ಎಂದು ತೋರಿಸುವಲ್ಲಿ ನಾನು ವಿಫವನಾಗುತ್ತೇನೆ.[2]

ನಾವು ಯೇಸುವಿನೊಡನೆ ಇದ್ದಾಗ, ಆತನ ಒಂದು ಬದಿಯ ಸುವಾರ್ತೆಯು ದಾಖಲಿಸಿದೆ, ಆತನ ಮನುಷ್ಯ ಮಾತ್ರದ ಅಸಾಯಕತೆಯು ವಿರಳವಾಗಿ ಹೊರಹೊಮ್ಮುವದನ್ನು ನಾವು ಕಾಣುತ್ತೇವೆ.[3] ಆತನು ಸಂಪೂರ್ಣವಾಗಿ ದೇವರಾಗಿದ್ದನು, ಆದರೆ ಅದೇ ಸಮಯದಲ್ಲಿ ಆತನು ಸಂಪೂರ್ಣವಾದ ಮನುಷ್ಯನು ಆಗಿದ್ದನು. ಯೇಸುವಿನ ನರಾವತಾರದ ಬಗ್ಗೆ ಹೆಚ್ಚಾಗಿ ನಾವು ಅಳೆಯಲಾರೆವು;[4] ಆದರೆ ಆಗಾಗ್ಗೆ ಕ್ರಿಸ್ತನ ದೈವತ್ವಕ್ಕೂ ಮತ್ತು ಆತನ ಮಾನವತ್ವಕ್ಕೂ ಮಧ್ಯ ತುಮುತಲೆಯ ಇದ್ದೇ ಇತ್ತು. ಆ ತುಮುಲತೆಯು ತೋಟದಲ್ಲಿರುವುದಕ್ಕಿಂತ ಹೆಚ್ಚಾಗಿ ಎಲ್ಲಿಯೂ ವ್ಯಕ್ತವಾಗಿಲ್ಲ. ಕರ್ತನು ತನ್ನ ಶಿಷ್ಯರಿಗೆ "ಮನಸ್ಸು ಸಿದ್ಧವಾಗಿದೆ ಆದರೆ ದೇಹಕ್ಕೆ *ಬಲವು* ಸಾಲದು" (ಮತ್ತಾಯ 26:41; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದರಲ್ಲಿ, ಆತನು ಅದನ್ನು ಕೇವಲ ಅವರಿಗಾಗಿ ಮಾತಾಡಿರಲಿಲ್ಲ.

ಆತನ ತನಗಾಗಿಯೂ ಸಹ ಮಾತನಾಡಿದ್ದನು. ಪರಲೋಕದಿಂದ ಬಂದಂಥ ಕ್ರಿಸ್ತನು "ತನ್ನನ್ನು ಬರಿದು ಮಾಡಿಕೊಂಡು ... ಮನುಷ್ಯನಾಗಿ ಕಾಣಿಸಿಕೊಂಡನು" ಎಂದು ಪೌಲನು

ಬರೆದಿದ್ದಾನೆ (ಫಿಲಿಪ್ಪಿ 2:7; ಒತ್ತಿ ಹೇಳಿದ್ದು ನನ್ನದು). ಇಬ್ರಿಯ ಪತ್ರಿಕೆಯ ಲೇಖಕನು ಯೇಸು "*ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ* ಸಮಾನನಾಗಬೇಕಾಗಿ ಬಂತು ... ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು" (ಇಬ್ರಿಯ 2:17; ಒತ್ತಿ ಹೇಳಿದ್ದು ನನ್ನದು) ಎಂದು ಬರೆದಿದ್ದಾನೆ. ಕ್ರಿಸ್ತನು ತನ್ನ ಶೋಧನೆಯಲ್ಲಿ "ತನ್ನ ಸಹೋದರರಂತೆ ಆಗುವುದನ್ನು" ಲೇಖಕನು ಸೇರಿಸಿದ್ದಾನೆ. ಆತನು "ಆತನು ತಾನೇ [ಶೋಧಿಸಲ್ಪಟ್ಟ] ಬಾಧೆಯನ್ನು ಅನುಭವಿಸಿದನು ಅಥವಾ *ಪರೀಕ್ಷಿಸಲ್ಪಟ್ಟನು*"; ಆತನು "ಸರ್ವ ವಿಷಯದಲ್ಲಿ *ನಮ್ಮ ಹಾಗೆ* ಶೋಧನೆಗೆ ಗುರಿಯಾದನು" (2:18; 4:15; ಒತ್ತಿ ಹೇಳಿದ್ದು ನನ್ನದು). ದೇಹದಲ್ಲಿ ಅನುಭವಿಸುವ ಯೇಸುವಿನ ಬಾಧೆಯು ಕೇವಲ ಶಿಲುಬೆಯ ಮೇಲಿನ ಆತನ ಮರಣವನ್ನು ಮಾತ್ರ ಒಳಗೊಂಡಿರಲಿಲ್ಲ (1 ಪೇತ್ರ 3:18), ಆದರೆ ತೋಟದಲ್ಲಿ ಆತನು ಅನುಭವಿಸಿದ್ದೂ ಸಹ ಇದರಲ್ಲಿ ಸೇರಿದೆ. "*ಕ್ರಿಸ್ತನು ಭೂಲೋಕದಲ್ಲಿದ್ದಾಗ* ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (ಇಬ್ರಿಯ 5:7; ಒತ್ತಿ ಹೇಳಿದ್ದು ನನ್ನದು).

ಅಡವಿಯಲ್ಲಿ ಕ್ರಿಸ್ತನು ಸೈತಾನೊಂದಿಗೆ ಹೋರಾಡಿದನು (ಮತ್ತಾಯ 4:1-11); ತೋಟದಲ್ಲಿ ಆತನು ತನ್ನೊಂದಿಗೆ ತನ್ನ ಮಾನವನತೆಯೊಂದಿಗೆ ಹೋರಾಡಿದನು. ಆತನು ಭೂಮಿಯ ಮೇಲಿದ್ದಾಗ ತೋಟದಲ್ಲಿನ ಆತನ ದೊಡ್ಡ ಹೋರಾಟದ ಬಗ್ಗೆ ನನಗೆ ಮನವರಿಕೆಯಾಗಿದೆ. J. W. McGarvey ರವರು "ತೋಟದೊಳಕ್ಕೆ ಪ್ರವೇಶಿಸಿದ ಸಮಯದಿಂದ ಶಿಲುಬೆಯ ಮೇಲೆ ಆತನು ಮರಣಿಸುವ ತನಕ ಆತನೊಳಗಣ ಮನುಷ್ಯನು ಪ್ರಧಾನವಾಗಿದ್ದನು; ಮತ್ತು ಮಾನವನಂತಿರುವದು ಒಂದು ವಿಧಾನವಾಗಿರುವಂತೆ ಕಂಡುಬಂದಿತು. ಈ ಎಲ್ಲಾ ಕಷ್ಟಗಳನ್ನು ಆತನು ಸಂಪೂರ್ಣಮಾನವನಾಗಿದ್ದರೆ ಎಂಬಂತೆ ಸೈರಿಸಿಕೊಂಡನು ಎಂದು ಹೇಳಿದಾಗ ಇದು ಸರಿ ಎಂದು ನಾನು ನಂಬುತ್ತೇನೆ."[5] ಹೇಗೂ, ನಾವು ಸತ್ಯದ ಲೋಕ ವನ್ನು, ಧಾರ್ಮಿಕತೆಯಿಲ್ಲದ ಆಶ್ಚರ್ಯ ಮತ್ತು ಭೀತಿ ಇರುವಂತೆ ಕರೆಯಲ್ಪಡುವ ಧಾರ್ಮಿಕ ನಂಬಿಕೆಯತ್ತ ನಾವು ಪ್ರವೇಶಿಸುತ್ತಿದ್ದೇವೆ ಎಂದು ನಾವು ಅರಿತುಕೊಳ್ಳಲೇಬೇಕು.[6]

## ತೊಳಲಾಟದ ಸ್ಥಳ

ನಾವು ತೋಟದಲ್ಲಿ ಹೆಜ್ಜೆಯಿಡುತ್ತಿದ್ದಂತೆ,[7] ಇದು ತೊಳಲಾಟದ ಸ್ಥಳ ಎಂದು ಹೇಳುವುದರ ಮೂಲಕ ನಾನು ಪ್ರಾರಂಭಿಸುತ್ತೇನೆ. ಕರ್ತನು ಹೋರಾಡಿದ ಹೋರಾಟಗಳಲ್ಲಿ ಇದು ಅತೀ ದೊಡ್ಡದು ಅಲ್ಲವಾಗಿದ್ದರೂ ದೊಡ್ಡ ಹೋರಾಟವಾಗಿತ್ತು.

### ಪರಿತಾಪದ ಸ್ಥಳ

ಯೇಸುವಿಗೆ ಗೆತ್ಸೆಮನೆ ತೋಟವು ಮೊದಲನೆಯ ಮತ್ತು ಅದಕ್ಕೂ ಪ್ರಾಮುಖ್ಯದ ಪರಿತಾಪದ ಸ್ಥಳವಾಗಿತ್ತು. ಈ ಸತ್ಯದ ಕಾರಣದಿಂದಾಗಿ, ಇತರ ಅಂಶಗಳಿಗಿಂತ ಹೆಚ್ಚಾಗಿ ಇದರ ಮೇಲೆ ನಾವು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳೋಣ.[8]

ಮತ್ತಾಯ 26:36ರಲ್ಲಿ ನಾವು ಓದುವಂತೆ "ಅನಂತರ ಯೇಸು ತನ್ನ ಶಿಷ್ಯರ ಸಂಗಡ [ಆತನ ಅಪೊಸ್ತಲರ] ಗೆತ್ಸೆಮನೆ ಎಂಬ ತೋಟಕ್ಕೆ ಬಂದನು." "ಗೆತ್ಸೆಮನೆ" ಎಂಬ ಹೆಸರಿನ ಅರ್ಥವು "ಎಣ್ಣೆಯ ಗಾಣ" ಎಂದಾಗಿತ್ತು. ಈ ಸಂದರ್ಭಕ್ಕೆ ಈ ಹೆಸರು ಯೋಗ್ಯವಾದದ್ದಾಗಿದೆ: ಘಟಿಸಬೇಕಾದ ಘಟನೆಗಳು ಆತನ ಮೇಲೆ ಒತ್ತುತ್ತಿರುವ, ಶಿಲುಬೆಯ ನೆರಳಿನ ಬೆದರಿಕೆ ಆತನನ್ನು ಹಿಂಡುವ ಸ್ಥಳವೇ ಯೇಸು ಬಂದಂಥ ಆ ಸ್ಥಳವು ಆಗಿತ್ತು.

ಸುವಾರ್ತೆಯ ಲೇಖಕರು ಕರ್ತನ ನೋವನ್ನು ಸ್ಪುಟವಾಗಿ ಸುಚಿತ್ರವಾಗಿ ರೀತಿಯಲ್ಲಿ ವರ್ಣಿಸಿದ್ದಾರೆ: "ದುಃಖಪಟ್ಟು ಮನಗುಂದಿದವನಾದನು" ಎಂದು ಮತ್ತಾಯ ಹೇಳಿದ್ದಾನೆ

(ಮತ್ತಾಯ 26:37); ಮಾರ್ಕನು ಆತನು "ಬೆಚ್ಚಿಬೆರಗಾಗಿ ಮನಗುಂದಿದವನಾದನು" ಎಂದು ಬರೆಯುತ್ತಾನೆ (ಮಾರ್ಕ 14:33). ಯೇಸು ತನ್ನ ಶಿಷ್ಯರಿಗೆ "ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ" ಎಂದು ಹೇಳಿದನು (ಮತ್ತಾಯ 26:38). NIV ಯಲ್ಲಿ "ನನ್ನಾತ್ಮಕ್ಕೆ ಸಾಕಾಗಿ ಹೋಗಿದೆ" ಎಂದಿದೆ. NLT ಯಲ್ಲಿ, "ನನ್ನ ಆತ್ಮವು ದುಃಖದಿಂದ ಜಜ್ಜಿ ಹೋಗಿದೆ" ಎಂದಿದೆ. "ಸಾಯುವಷ್ಟು" ಎಂಬ ಪದವು ಕೇವಲ ಗೋಲ್ಗಥಾದ ದುಃಖವಷ್ಟೆ ಸೂಚಿಸುವದಲ್ಲ, ಆದರೆ ಗೆತ್ಸೆಮನೆಯ ಪರಿತಾಪವನ್ನು ಕೂಡಾ ಸೂಚಿಸುವುದಾಗಿದೆ. AB ಯಲ್ಲಿ, "ನಾನು ಈಗಾಗಲೇ ಸಾಯುವ ದುಃಖದಲ್ಲಿ ಇದ್ದೇನೆ" ಎಂದಿದೆ.

ಕ್ರಿಸ್ತನು ತನ್ನ ಶಿಷ್ಯರನ್ನು ಬಿಟ್ಟು ಹೊರಟಮೇಲೆ, ಆತನು ನೆಲದ ಮೇಲೆ ಬೋರಲಾಗಿ ಬಿದ್ದನು ಮತ್ತು ಪ್ರಾರ್ಥಿಸಲು ಆರಂಭಿಸಿದನು. "ನನ್ನ ತಂದೆಯೇ ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ" ಎಂದು ಪ್ರಾರ್ಥಿಸಿದನು (ಮತ್ತಾಯ 26:39).[9] "ಪಾತ್ರೆ" ಇದು ಆತನಿಗಾಗಿ ಕಾಯುತ್ತಿರುವ[10] ಎಲ್ಲಾ ಭೌತಿಕ, ಭಾವನಾತ್ಮಕ, ಆತ್ಮಿಕ ಸಂಕಷ್ಟಗಳನ್ನು ಸೂಚಿಸುವುದಾಗಿದೆ. ಇಬ್ರಿಯ ಪುಸ್ತಕದ ಲೇಖಕನು ಆತನು "... ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ. ಕೇಳಲ್ಪಟ್ಟನು" ಎಂದು ಹೇಳುತ್ತಾನೆ (ಇಬ್ರಿಯ 5:7).

ಲೂಕನು ಆ ದೃಷ್ಯವನ್ನು ಈ ರೀತಿಯಲ್ಲಿ ವಿವರಿಸುತ್ತಾನೆ. "ಆತನು ಮನೋ ವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ದೊಡ್ಡ ರಕ್ತದ ಹನಿಗಳೋಪಾದಿಯಲ್ಲಿತ್ತು" (ಲೂಕ 22:44). ಪಸ್ಕವು ವಸಂತಮಾಸದ[11] ಆರಂಭದಲ್ಲಿ ಬರುವುದರಿಂದ ರಾತ್ರಿಯಲ್ಲಿ ವಾತಾವರಣವು ತಂಪಾಗಿಯೂ ತಣ್ಣಗೆಯೂ ಇರುತ್ತಿತ್ತು (ನೋಡಿರಿ ಯೋಹಾನ 18:18). ಸ್ವಾಭಾವಿಕವಾಗಿ ಬೆವರು ಬರುವ ಸಮಯವು ಅದಾಗಿರಲಿಲ್ಲ. ಒಡೆಯನ ಮುಖದಿಂದ ಇಳಿದ ಬೆವರು ಹೊರಗಿನ ವಾತಾವರಣದ ಪರಿಣಾಮದಿಂದ ಆಗಿರಲಿಲ್ಲ, ಆದರೆ ಅಂತರ್ಯದ ವಿಪ್ಲವದಿಂದಲೇ.

ಭಾಷ್ಯಾಕಾರರು "ದೊಡ್ಡ ರಕ್ತದ ಹನಿ" ಎಂಬ ಪದದ ಬಗೆಗೆ ಅಚ್ಚರಿಗೊಳ್ಳುತ್ತಾರೆ. ಇದೊಂದು ವಿರಳವಾದ ವೈದ್ಯಕೀಯ ಸ್ಥಿತಿಯಾಗಿದ್ದು ತೀವ್ರವಾದ ಒತ್ತಡದ ಅಡಿಯಲ್ಲಿದ್ದಾಗ, ಹಣೆಯಲ್ಲಿನ ಸೂಕ್ಷ್ಮ ರಕ್ತವಾಹಿನಿಗಳು ಬೆವರು ಗ್ರಂಥಿಗಳ ಮೂಲಕ ರಕ್ತಸ್ರಾವವಾಗುತ್ತದೆ ಮತ್ತು ರಕ್ತದ ದ್ರವವು ಚರ್ಮದ ಮೂಲಕ ಹೊರಸೂಚಿಸುತ್ತದೆ.[12] ವೈದ್ಯನಾದ ಲೂಕನು ಕರ್ತನ ಅಂತರಿಕ ಹೋರಾಟದ ಬೇಗುದಿಯನ್ನು ಎತ್ತಿತೋರುತ್ತಾ ಇಂಥಾ ಸ್ಥಿತಿಯನ್ನು ವರ್ಣಿಸಿರುವ ಸಾಧ್ಯತೆಯು ಇದೆ. ಇದು ಹೆಚ್ಚಾಗಿ "ಅದರಂತೆ" ಎಂಬ ಪದದ ಮೇಲೆ ಒತ್ತುಕೊಡುವುದಾಗಿದೆ. ಇದು ಆಳವಾದ ಗಾಯದ ಮೂಲಕ ರಕ್ತವು ಹರಿಯುವಂತೆಯೂ ಕೂಡಾ ಇರುವುದು, ಆದ್ದರಿಂದ ಬೆವರು ಯೇಸುವಿನ ಮುಖದಿಂದ ನೆಲಕ್ಕೆ ಬಿತ್ತು.

ತೋಟದಲ್ಲಿನ ಕ್ರಿಸ್ತನ ವ್ಯಾಕುಲವನ್ನು ಮತ್ತು ತನ್ನ ಮರಣದ ಬಗೆಗೆ ಹಿಂದೆ ತಾಳಿದ ಶಾಂತಚಿತ್ತದೊಡನೆ ಸರಿಗೂಗಿಸಲು ಕೆಲ ಲೇಖಕರು ತೊಂದರೆಯನ್ನು ಹೊಂದಿದ್ದಾರೆ. "ಆತನು ಯಾವಾಗಲೂ ಮರಣದ ಬಗೆಗೆ ಮಾತನಾಡುವಾಗ[13] ಯಾವುದೇ ಸ್ಪಷ್ಟವಾದ ತಳಮಳವನ್ನು ಹೊಂದಿರಲಿಲ್ಲ" ಎಂದು ಅವರು ಹೇಳುತ್ತಾರೆ. ವೈಯಕ್ತಿಕವಾಗಿ, ನನಗೆ ಯಾವ ವ್ಯತ್ಯಾಸವು ಕಾಣುವುದಿಲ್ಲ. ಮೊದಲ ಸ್ಥಾನದಲ್ಲಿ, ಯೇಸು ತನ್ನ ಹಿಂದಿನ ಘೋಷಣೆಯನ್ನು ಮಾಡುವಾಗ ಹಾಗೆ ಕಂಡಿದ್ದನೋ ಅಥವಾ ಹೇಗೆ ಉಚ್ಚರಿಸಿದನೋ ಅದು ನಮಗೆ ಹೇಳಲ್ಪಟ್ಟಿಲ್ಲ; ಆತನ ಧ್ವನಿ ಮತ್ತು ಮುಖಭಾವಗಳು ಬರೆಯಲ್ಪಟ್ಟ ದಾಖಲೆಗಿಂತ ಹೆಚ್ಚಾದ ಭಾವನೆಗಳನ್ನು ಸೂಚಿಸುತ್ತವೆ ಎಂದು ತಿಳಿಸುವುದಾಗಿದೆ.[14] ಎರಡನೆಯ ಸ್ಥಾನದಲ್ಲಿ, ಯೇಸು "ದೇಹದಲ್ಲಿನ" ತನ್ನ ಮರಣವನ್ನು ಸಮೀಪಿಸಿದನು ಎಂದು ನಾನು ನಂಬುವುದರಿಂದ, ನೈಜ ಘಟನೆಯು ಹತ್ತಿರಕ್ಕೆ ಎಳೆಯುತ್ತಿರುವಾಗ ಆತನ ಭಾವನೆಯ ಮಟ್ಟ ಏರುವುದನ್ನು ನಾನು ಗುರುತಿಸಬಲ್ಲೆನು. ನಾನು ಶಸ್ತ್ರಚಿಕಿತ್ಸೆ ಹೊಂದಿದಾಗಿನ ಸಮಯವನ್ನು ನಾನು ಉದಾಹರಿಸುತ್ತೇನೆ. ವಾರಗಳ

ಆರಂಭಕ್ಕೂ ಮುನ್ನ ನಾನು ಶಸ್ತ್ರಚಿಕಿತ್ಸೆಗೆ ಒಳಗಾಗುವ ಆ ಸಮಯವು ಬರುವ ಮುನ್ನ ನಾನು ಶಾಂತತೆಯಿಂದ ಮತ್ತು ವಿವೇಕ ಬದ್ಧವಾಗಿ ಮಾತನಾಡುತ್ತಿದ್ದೆನು. ಹೇಗೆ ಅಂತಿಮವಾಗಿ ನಾನು ಆಸ್ಪತ್ರೆಗೆ ಹೋಗುವ ಆ ಕ್ಷಣವು ಬಂದಾಗ ನನ್ನ ಹೆಚ್ಚಾ ಕಡಿಮೆ ಹೇಳಬೇಕೆಂದರೆ ನನ್ನ ಶಾಂತತೆಯು ಆರಲು ಆರಂಭಿಸಿತು. ಯೇಸುವಿನ ಈ ಹೇಳಿಕೆಯು ನನಗೋಸ್ಕರ ಹೊಸ ಅರ್ಥವನ್ನು ಕೊಡುತ್ತದೆ: "ಮನಸ್ಸು ಸಿದ್ಧವಾಗಿದೆ, ಆದರೆ ದೇಹಕ್ಕೆ ಬಲ ಸಾಲದು"! "ಶಸ್ತ್ರ ಚಿಕಿತ್ಸೆಕರಿಗೆ ಇದು ನಿಜವಾಗಿಯೂ ನನಗೆ ಅವಶ್ಯವಿದೆ ಎಂಬುದು ನಿಮಗೆ ಖಚಿತವಿದೆಯಾ? ಖಚಿತವಾಗಿ, ನಾವು ಈ ಸಮಸ್ಯೆಯನ್ನು ನೋಡಿಕೊಳ್ಳಲು ಬೇರೆ ಇನ್ನೊಂದು ಮಾರ್ಗವಿದೆಯಾ" ಎಂದು ನಾನು ಹೇಳುವುದನ್ನು ನನ್ನಷ್ಟಕ್ಕೆ ಕಲ್ಪಿಸಿಕೊಳ್ಳುವುದರಲ್ಲಿ ನನಗೇನೂ ತೊಂದರೆಯಿಲ್ಲ.

ನಾವು ಈಗಾಗಲೇ ಗಮನಿಸಿದಂತ ಯೇಸುವಿನ ಪ್ರಾರ್ಥನೆಯಲ್ಲಿನ "ಬಟ್ಟಲು" ಆತನ ದೈಹಿಕ, ಭಾವನಾತ್ಮಕ, ಮತ್ತು ಆತ್ಮೀಕ ಸಂಕಷ್ಟವನ್ನು ಸೂಚಿಸುವುದಾಗಿದೆ. ಆತನಿಗಾಗಿ ಕಾಯುತ್ತಿದ್ದ ಪ್ರತಿಯೊಂದು ವಿಧದ ಸಂಕಷ್ಟಗಳನ್ನು ಪರಿಗಣಿಸಲು ಒಂದು ಕ್ಷಣ ತೆಗೆದುಕೊಳ್ಳಿರಿ. ಮೊದಲು, ಅಲ್ಲಿ ದೈಹಿಕ ಸಂಕಷ್ಟವು ಇತ್ತು: ಮೂವತ್ತರ ಹರೆಯದ ಮನುಷ್ಯನಿಗೆ ಮರಣವು ಅಪಾಯಮಾನವಾದದ್ದಲ್ಲ. ಆ ವಯಸ್ಸಿನಲ್ಲಿ ಅನೇಕರು ತಮ್ಮ ಜೀವನವನ್ನು ಪ್ರಾರಂಭಿಸುವವರಾಗಿರುತ್ತಾರೆ. ಈತನೂ ತನ್ನ ಜೀವಿತವನ್ನು ಮುಗಿಸುತ್ತಿದ್ದಾನೆ.[15] ಈ ತರದ ಮರಣಕ್ಕಿಂತಲೂ ಬಲು ಮಹತ್ವದ್ದನ್ನು ಆತನು ಅನುಭವಿಸಬೇಕಿತ್ತು: ಶಿಲುಬೆಯು ಎಂದಿಗೂ ಮಾನವನಿಂದ ಯೋಜಿತವಾದ ಹಿಂಸೆಗಾಗಿ ಇರುವ ಕ್ರೂರವಾದ ಸಾಧನ ಎಂದು ಕರೆಯಲ್ಪಡುತ್ತಿತ್ತು.[16] ಜಾನ್ ಗಿಪ್ಸನ್ ಹೀಗೆ ಬರೆಯುತ್ತಾರೆ,

> ಆತನ ತನ್ನ ಬೆನ್ನಮೇಲಿನ ಕಟ್ಟಿದ ಅನುಭವವು ಆತನಿಗಾಯಿತು, ಮುಳ್ಳಿನ ಕಿರೀಟವು ಆತನ ಹುಬ್ಬುಗಳಿಗೆ ಒತ್ತಿ ರಕ್ತವು ಆತನ ಮಖದ ಮೇಲೆ ತೊಟ್ಟಿಕ್ಕತೊಡಗಿತು, ಆತನ ಕೈಗಳಿಗೆ ಮತ್ತು ಪಾದಗಳಿಗೆ ಸೈನಿಕರು ಮೊಳೆಗಳನ್ನು ಹೊಡೆಯುವಾಗ ಮಾಂಸವು ಹರಿಯುತ್ತಿತ್ತು, ಮತ್ತು ಆಗಲೇ ಕ್ರೂಜಿಸುವುದರ ನೋವು - ನಿಧಾನವಾದ ಮತ್ತು ಮರಣದ ಹಿಂಸೆಯಾಗಿತ್ತು ...[17]

ಕ್ರಿಸ್ತನು ಭಾವಾನಾತ್ಮಕವಾಗಿಯೂ ಕೂಡಾ ನೋಯಿಸಲ್ಪಟ್ಟನು. ಗಿಪ್ಸನ್ ಮುಂದುವರೆಯುತ್ತಾ,

> ತನ್ನ ವೈರಿಗಳ ಅವಮಾನವನ್ನು ಸ್ನೇಹಿತರ ಪರಿತ್ಯಾಗವನ್ನು, ತಾನು ಸಾಹಾಯಿಸಿದ ಮತ್ತು ಆತನಿಂದ ಲಾಭವನ್ನು ಹೊಂದಿದ ಜನರ ಕೃತಜ್ಞತೆಯನ್ನು ಸೈರಿಸಲು ಕರೆಯಲ್ಪಟ್ಟಿದ್ದನು. ಯೆಹೂದಿ ನಾಯಕರ ದ್ವೇಷವನ್ನು, ಯೂದನ ಗುರುದ್ರೋಹ ವನ್ನು ಜನರ ಚಂಚಲತೆಯನ್ನು ಮತ್ತು ಸಾಮಾಜಿಕ ನ್ಯಾಯವಾದಿಗಳಿಂದ ಆತನು ಅಣಕಿಸುವುಕೆಯನ್ನು ಎದುರಿಸಿದನು.[18]

ಯೇಸುವಿನ ಭಾವಾನಾತ್ಮಕ ತೊಳಲಾಟದಲ್ಲಿ ಕ್ರೂಜಿಯೂ ಒಳಗೊಂಡಿರುವದು ನಾಚಿಕೆಪಡುವ ವಿಷಯ ಆಗಿತ್ತು. ಕ್ರೂಜೆಗೆ ಹಾಕುವುದು "ಗುಲಾಮರಿಗೆ, ಬೇರೆದೇಶದವರಿಗೆ, ಕ್ರಾಂತಿಕಾರಿಗಳಿಗೆ, ಮತ್ತು ದುಷ್ಟ ಅಪರಾಧಿಗಳಿಗೆ ... ಸೀಮಿತವಾಗಿತ್ತು."[19] ಇಬ್ರಿಯ 12:2 ಹೀಗೆ ಹೇಳುತ್ತದೆ. ಕ್ರಿಸ್ತನು "ಅವಮಾನವನ್ನು ಅಲಕ್ಷಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ..." ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ - "ಮರಕ್ಕೆ ತೂಗುಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದಿರುವಂತೆ ಕ್ರಿಸ್ತನು ಆದನು ಎಂದು ಪೌಲನು ಹೇಳುತ್ತಾನೆ" (ಗಲಾತ್ಯ 3:13).

ಯೇಸುವಿನ ದೊಡ್ಡ ಬಾಧೆಯು, ಹೇಗೂ, ದೈಹೀಕವಾದದ್ದು ಅಥವಾ

ಭಾವನಾತ್ಮಕವಾದದ್ದು ಆಗಿರಲಿಲ್ಲ. ಆದರೆ ಆತ್ಮೀಕವಾದದ್ದಾಗಿತ್ತು. ಯಾಕೆಂದರೆ, "ನಾವು ಅಗಾಧವಾದ ನಮ್ಮ ಬಿಡುಗಡೆಯ ರಹಸ್ಯದ ದುರ್ಗಮದ ಆಳದಲ್ಲಿ ಸಾಗುತ್ತಿದ್ದೇವೆ" ಎಂದು ಡೋನಾಲ್ಡ್ ಮಿಲ್ಲರ್ ಇಟ್ಟಂತೆ ಇಲ್ಲಿ. ನಾವು ಎಚ್ಚರಿಕೆಯಿಂದ ಸಾಗಬೇಕಾಗುತ್ತದೆ.[20] ನಾವು ಶಿಲುಬೆಯ ಮೇಲಣ ಕ್ರಿಸ್ತನ ಆತ್ಮೀಕ ಬಾಧೆಯ ಬಗೆಗೆ ಮಾತನಾಡಬಹುದು, ಆದರೆ ನಾವು ಅದನ್ನು ಸಂಪೂರ್ಣವಾಗಿ ಗ್ರಹಿಸಲಾರೆವು. ದೇವವಾಕ್ಯವು ಏನನ್ನು ಬೋಧಿಸುತ್ತದೆಯೋ ಅದನ್ನು ಒತ್ತಿ ಹೇಳುವುದನ್ನು ನಾವು ಮಾಡಬಹುದು ಅವುಗಳು ಯೇಸು ಶಿಲುಬೆಯ ಮೇಲಿದ್ದಾಗ, ಆತನು ನಮ್ಮ ಪಾಪದ ದೋಷವನ್ನು ಮತ್ತು ಅದರಿಂದ ಬರುವ ಶಿಕ್ಷೆಯನ್ನು ತಮ್ಮ ಮೇಲೆ ತಂದುಕೊಂಡನು (ಯೆಶಾಯ 53:6; 2 ಕೊರಿಂಥ 5:21; 1 ಪೇತ್ರ 2:24). ಪಾಪವು ನಮ್ಮನ್ನು ದೇವರಿಂದ ಬೇರೆಮಾಡುವದು (ಯೆಶಾಯ 59:1, 2), ಮತ್ತು ಪಾಪದ ಅಂತಿಮ ದಂಡನೆಯು "ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗುವದು" ಆಗಿದೆ (2 ಥೆಸಲೋನಿಕ 1:9; ನೋಡಿರಿ ವಚನಗಳು 7-9). ಯೇಸು ನಮ್ಮ ದೋಷವನ್ನು ತಾನು ಹೊತ್ತುಕೊಂಡ ಮೇಲೆ ತಂದೆಗೆ ಯಾವ ಆಯ್ಕೆಯೂ ಇರಲಿಲ್ಲ. ಆತನು ಅವನಿಂದ ಮುಖತಿರುಗಿಸಿದನು (ನೋಡಿ ಮತ್ತಾಯ 27:46).

ನಾನು ಮತ್ತು ನೀನು ಎಂದಿಗೂ ಊಹಿಸದಂತಹ ದೈಹಿಕ, ಭಾವನಾತ್ಮಕ, ಮತ್ತು ಆತ್ಮೀಕ ತೊಳಲಾಟಗಳು ಪಾಪರಹಿತ ದೇವಕುಮಾರನಿಗೆ ಯಾಕೆ. ಜಗತ್ತು ಜೀವವನ್ನು ಹೊಂದಲು, ಆತನು ಸಾಯಲೇಬೇಕಿತ್ತು. ಜಗತ್ತಿಗೆ ಬೆಳಕು ಬರುವುದಕ್ಕೋಸ್ಕರ ಆತನು ನೇರವಾಗಿ ಕತ್ತಲೆಯೊಳಗೆ ತಳ್ಳಲ್ಪಟ್ಟನು.

ಯೇಸು ತೋಟದಲ್ಲಿ ಹೆಚ್ಚಿನ ಧೈರ್ಯವನ್ನು ಪ್ರದರ್ಶಿಸಿದನು ಎಂದು ಕೆಲ ಲೇಖಕರು ಯೋಚಿಸುವವರಾಗಿದ್ದಾರೆ. "ಇತರರು ಮರಣವನ್ನು ದೊಡ್ಡ ಶಾಂತತೆಯಿಂದ ಎದುರಿಸಿದರು" ಎಂದು ಅವರು ಹೇಳುತ್ತಾರೆ. ಇದರಲ್ಲಿನ ಎರಡು ವಿಚಾರಗಳು ಹೀಗಿವೆ: (1) ನಿಜವಾದ ಧೈರ್ಯವು ಭಯದ ಕೊರತೆಯಿಂದ ಪ್ರಯೋಗಿಸಲ್ಪಡುವುದಿಲ್ಲ, ಆದರೆ ಭಯವು ಮಿತಿ ಮೀರಿದಾಗ ಯಾವದು ಸರಿ ಎನ್ನಿಸುತ್ತದೋ ಅದನ್ನು ಮಾಡುವದು ಆಗಿದೆ. (2) ಅನೇಕರು ನೋವನ್ನು ಮತ್ತು ಮರಣವನ್ನು ಎದುರಿಸಿದಾಗ್ಯೂ, ಕರ್ತನು ಪಟ್ಟ ಪರಿತಾಪವನ್ನು ಯಾರೊಬ್ಬರೂ ಎದುರಿಸಿರಲಾರರು. *ಗಿನ್ನಿಸ್ ದಾಖಲೆಯ* ಪುಸ್ತಕವು[21] "ಎಂದಿಗೂ ಸಹಿಸಲಾರದ ಸಂಕಟಗಳ" ಪ್ರಕಾರಗಳನ್ನು ಹೊಂದಿದ್ದಾದರೆ, ಅದರ ಪಕ್ಕದಲ್ಲಿ ಶಿಲುಬೆಯ ಚಿತ್ರವು ದಾಖಲಾಗಿರುತ್ತಿತ್ತು.

ನಿಮ್ಮನ್ನು ನೀವು ಎಂದಾದರೂ "ದುಗುಡದ" ಸ್ಥಳದಲ್ಲಿ ಕಂಡುಕೊಂಡಿದ್ದೀರಾ? ಕರ್ತನು ಅಲ್ಲಿದ್ದಾನೆ ಮತ್ತು ಆತನು ಅರಿತುಕೊಳ್ಳಬಲ್ಲನು (ಇಬ್ರಿಯ 4:15).

**ಹತಾಶೆಯ ಸ್ಥಳ**

ಗೆತ್ಸೆಮನೆಯು ಯೇಸುವಿಗೆ ದುಗುಡದ ಸ್ಥಳ ಮಾತ್ರವಾಗಿರಲಿಲ್ಲ. ಇದು ಹತಾಶೆಯ ಸ್ಥಳವೂ ಆಗಿತ್ತು.

ನಿಯಮದಂತೆ, ಕ್ರಿಸ್ತನ ದೀರ್ಘ ಪ್ರಾರ್ಥನಾ ಅವಧಿಗಳು ಏಕಾಂತ ಸ್ಥಳದಲ್ಲಿ ನಡೆಸಲ್ಪಡುತ್ತಿದ್ದವು (ನೋಡಿರಿ ಮಾರ್ಕ 1:35; ಮತ್ತಾಯ 14:23). ಈ ಸಂದರ್ಭದಲ್ಲಿ, ಹೇಗೂ, ಆತನಿಗೆ ಜೊತೆಗಾರ ಅವಶ್ಯಕತೆಯು ಬೇಕಾಯಿತು. (ನಾನು ನನ್ನ ಶಸ್ತ್ರ ಚಿಕಿತ್ಸೆಯ ಉದಾಹರಣೆಗೆ ಮರಳುತ್ತೇನೆ; ಆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುವಾಗ ನಾನು ಪ್ರೀತಿ ಸುತ್ತಿರುವ ವ್ಯಕ್ತಿಗಳು ನನ್ನ ಹತ್ತಿರ ಇರಬೇಕೆಂದು ನಾನು ಬಯಸುತ್ತಿದ್ದೆನು.[22] ನಾನೇನು ಹೇಳುತ್ತಿದ್ದೇನೆ ಎಂದು ನೀವು ಬಹುಶಃ ಅರಿತುಕೊಂಡಿರಬಹುದು.) ಕ್ರಿಸ್ತನು ತೋಟದಲ್ಲಿ ಹತ್ತಿಕ್ಕಲ್ಪಡುತ್ತಿದ್ದಂತೆಯೇ, "ಪೇತ್ರ ಯಾಕೋಬ, ಯೋಹಾನರನ್ನು ತನ್ನ ಜೊತೆಯಲ್ಲಿ ಕರಕೊಂಡು ಹೋದನು" (ಮಾರ್ಕ 14:33). "ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರ

ವಾಗಿರ್ರಿ'' ಎಂದು ಆತನು ಅವರನ್ನು ಬೇಡಿಕೊಂಡನು (ಮಾರ್ಕ 26:38). ಹೌದು, ಅವರು ದೈಹಿಕವಾಗಿ ಮಾನಸಿಕವಾಗಿ ತುಂಬಾ ಬಳಲಿದ್ದರು ಎಂದು ನಾನು ಬಲ್ಲೆನು ಆದರೆ (ಮಾರ್ಕ 14:37ರಿಂದ ಯೇಸುವಿನ ಮಾತುಗಳನ್ನು ತೆಗುದುಕೊಂಡಾಗ) ಅವರು ಒಂದು ತಾಸಾದರೂ ಆತನೊಡನೆ ಎಚ್ಚರವಾಗಿರಲಾರದೆ ಹೋದರೇ?

ತೋಟದಲ್ಲಿ ಕ್ರಿಸ್ತನ ಮೇಲೆ ನಿರಾಶೆಯು ರಾಶಿಯಾಗುತ್ತಾ ಸಾಗಿತು: ಹನ್ನೆರಡು ಜನರೊಡನೆ ವರ್ಷಗಳನ್ನು ಕಳೆದನು, ಆದರೆ ಅವರಲ್ಲಿ ಒಬ್ಬನು ಆತನಿಗೆ ಗುರುದ್ರೋಹವನ್ನು ಎಸಗಿದನು. ಆತ್ಮೀಕ ರಾಜ್ಯದ ಬಗ್ಗೆ ಬೋಧಿಸುತ್ತಾ ಆತನು ವರ್ಷಗಳನ್ನು ಕಳೆದನು, ಆದರೆ ರಾಜಕೀಯ ರಾಜ್ಯದಲ್ಲಿರುವಂತೆ ಭೌತಿಕ ಆಯುಧಗಳಿಂದ ಎದುರಿಸಬೇಕೆಂದು ಎಂದು ಪೇತ್ರನು ಇನ್ನೂ ಯೋಚಿಸುವವನಾಗಿದ್ದನು. ನಿಮ್ಮನ್ನು ನೀವು ಎಂದಾದರೂ "ದುಗುಡದ" ಸ್ಥಳದಲ್ಲಿ ಕಂಡುಕೊಂಡಿದ್ದೀರಾ? ಕರ್ತನು ಅಲ್ಲಿದ್ದಾನೆ ಮತ್ತು ಆತನು ಅರಿತುಕೊಳ್ಳಬಲ್ಲನು.

### ಪರಿತ್ಯಾಗದ ಸ್ಥಳ

ಆ ತೋಟದ ಪರಿತ್ಯಾಗದ ಸ್ಥಳವೂ ಆಗಿತ್ತು. ತನ್ನ ಸ್ನೇಹಿತರ ಜೊತೆಯನ್ನು ಕ್ರಿಸ್ತನು ಬಯಸಿದಾಗ, ಅವರು ಮಲಗಿದರು. ಕೊನೆಯಲ್ಲಿ "ಆತನ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು'' (ಮತ್ತಾಯ 26:56).[23] ನಿಮ್ಮನ್ನು ನೀವು ಎಂದಾದರೂ "ಪರಿತ್ಯಾಗದ'' ಸ್ಥಳದಲ್ಲಿ ಕಂಡುಕೊಂಡಿದ್ದೀರಾ? ಕರ್ತನು ಅಲ್ಲಿದ್ದಾನೆ ಮತ್ತು ಆತನು ಅರಿತುಕೊಳ್ಳಬಲ್ಲನು. ನಾವು ಇಲ್ಲಿಗೆ ನಿಂತಿದ್ದಾದರೆ ನಮ್ಮ ಸಮಯವು ಸರಿಯಾಗಿ ಕಳೆದದ್ದು ಎಂದಾಗುತ್ತದೆ.

ನಾವೆಲ್ಲರೂ ನಮ್ಮದೆ ಆದ ಗೆತ್ಸೆಮನೆಯನ್ನು ಹೊಂದಿದ್ದೇವೆ. ಹಾಗೆ ನೋಡಿದರೆ, ನಿಮ್ಮಲ್ಲಿ ಕೆಲವರು, ಈಗ ನಿರಾಶೆಯ, ಹತಾಶೆಯ, ಅಥವಾ ಪರಿತ್ಯಾಗದ ತೋಟದಲ್ಲಿರಬಹುದು. ನೀನು ಯಾವುದರ ಮೂಲಕ ಸಾಗುತ್ತಿದ್ದೀ ಎಂದು ಯೇಸು ಬಲ್ಲವನಾಗಿರುತ್ತಾನೆ ಎಂದು ಅರಿತುಕೊಳ್ಳುವದು ಎಂಥಾ ಮಹತ್ವವಾದದ್ದು ಆಗಿದೆಯಲ್ಲವೇ! ಆತನು ಅರಿತುಕೊಳ್ಳುತ್ತಾನೆ ಮತ್ತು ಕರುಣೆತೋರುವವನಾಗಿರುತ್ತಾನೆ. "ಆತನು ನಮ್ಮ ಪ್ರಕೃತಿಯನ್ನು ಬಲ್ಲನು; ನಾವು ಧೂಳಿಯಾಗಿದ್ದೇವೆಂಬುದನ್ನು ನೆನಪುಮಾಡಿಕೊಳ್ಳುತ್ತಾನೆ'' (ಕೀರ್ತನೆ 103:14). ಆತನು "ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ಪಾಪ ಮಾತ್ರ ಮಾಡಲಿಲ್ಲ'' (ಇಬ್ರಿಯ 4:15).

## ವಿಜಯದ ಯುಗ

ಅಲ್ಲಿ ಹೇಗೋ, ಕಥೆಗಿಂತಲೂ ಹೆಚ್ಚಾದದ್ದು ಇತ್ತು. ಗೆತ್ಸೆಮನೆಯ ಸಂಘರ್ಷದ ರಂಗಸ್ಥಳ ಮಾತ್ರ ಆಗಿರಲಿಲ್ಲ; ಇದು ವಿಜಯದ ಸ್ಥಳವೂ ಆಗಿತ್ತು. ಇಲ್ಲಿ ಕರ್ತನು ತನ್ನ ವಿಜಯಗಳಲ್ಲಿಯೇ ಒಂದು ದೊಡ್ಡ ವಿಜಯವನ್ನು ಸಂಪಾದಿಸಿದನು.

### ಪ್ರಾರ್ಥನೆಯ ಸ್ಥಳ

ಗೆತ್ಸೆಮನೆಯನ್ನು ನಕಾರಾತ್ಮಕ ದೃಷ್ಟಿಯಿಂದ ನೋಡಿದ್ದಾದ ಮೇಲೆ ಈಗ ನಾವು ಸಕಾರಾತ್ಮಕತೆಯತ್ತ ತಿರುಗೋಣ. ಮೊದಲು, ಆ ತೋಟವು ಪ್ರಾರ್ಥನೆಯ (ಛಿನ್ನಹದ) ಸ್ಥಳವಾಗಿತ್ತು ಎಂಬುದನ್ನು ನಾವು ಮೊದಲು ಗಮನಿಸಬೇಕು. ಯೇಸು ಒಂದು ಕಾರಣಕ್ಕೋಸ್ಕರ ತೋಟದೊಳಕ್ಕೆ ಹೋದನು: ಅದು ಪ್ರಾರ್ಥನೆಗಾಗಿ ಆತನು ತನ್ನ ಶಿಷ್ಯರಿಗೆ "ಇಲ್ಲೇ ಕೂತುಕೊಳ್ಳಿರಿ, ನಾನು ಅತ್ತಲಾಗಿ ಹೋಗಿ ಪ್ರಾರ್ಥನೆ ಮಾಡಿಬರುತ್ತೇನೆ'' ಎಂದು ಹೇಳಿದನು (ಮತ್ತಾಯ 26:36). ತನ್ನ ಜೀವಿತದ ಪ್ರಮುಖ ಮೈಲುಗಲ್ಲುಗಳ ಮುನ್ನ ಮತ್ತು ಆರಂಭದಲ್ಲಿ ಪ್ರಾರ್ಥಿಸುವದು ಯೇಸುವಿನ ಅಭ್ಯಾಸವಾಗಿತ್ತು;[24] ಇಲ್ಲಿಯೂ ಕೂಡಾ ಆತನು ಅದಕ್ಕೆ ಹೊರತಾದದ್ದನ್ನು ಮಾಡಲಿಲ್ಲ.

ಆ ಪದವು ಸುವಾರ್ತೆಯ ದಾಖಲೆಯಲ್ಲಿ ಅಲ್ಲದೇ ಎಲ್ಲಿಯೂ ಕಾಲದ ಆತನು ಬಳಸಿದ ಆ ಪದವನ್ನು - ನಾವು ನೋಡುವಾಗ ಯೇಸು ಯಾಕೆ ಪ್ರಾರ್ಥಿಸಿದನು ಎಂಬಂತೆ ನಾವು ಒಳನೋಟವನ್ನು ಕೊಟ್ಟಿದ್ದೇವೆ.[25] "ದೇವರನ್ನು ಪ್ರಾರ್ಥಿಸಿ - ಅಪ್ಪಾ ನನ್ನ ತಂದೆಯೇ!" ಎಂದು ಹೇಳಿದನು (ಮಾರ್ಕ 14:36). "ಅಪ್ಪಾ" ಇದರ ಅರಮೀಯ ಭಾಷೆಯ ಅರ್ಥವು "ತಂದೆ" ಎಂದಾಗಿದೆ. ಆದರೆ ಇದು ಒಂದು ಮಗುವು ಬಳಸುವಂತಹ ಪದವಾಗಿದ್ದು, ಶಿಶುವು ಕಲಿಯುವಂತಹ ಮೊದಲ ಪದವಾಗಿದೆ. ಆಂಗ್ಲ ಶಿಶುವು ಮಾತನಾಡುವಂತಹ "ಡಾ - ಡಾ" ಅಥವಾ "ಪಾ - ಪಾ" ಎಂಬಂಥದ್ದಾಗಿದೆ.[26] "ಅಪ್ಪಾ" ಎಂಬ ಪದವು ಸಾಮಿಪ್ಯವನ್ನು ವಿಶ್ವಾಸವನ್ನು ಮತ್ತು ಸಂಬಂಧವನ್ನು ಸೂಚಿಸುವಂತದ್ದಾಗಿದೆ; ತಂದೆಯೊಡನೆ ವಿಶೇಷ ಸಂಬಂಧವನ್ನು ಇದು ತೋರಿಸುವುದಾಗಿದೆ.

ಯೇಸು ಮಾತ್ರ ಪ್ರಾರ್ಥನೆ ಮಾಡಲಿಲ್ಲ, ಆದರೆ ಆತನು ಶಿಷ್ಯರಿಗೂ ಕೂಡ ಪ್ರಾರ್ಥಿಸುವಂತೆ ಪ್ರೋತ್ಸಾಹಿಸಿದನು: "ಆತನು ಆ ಕ್ಲುಪ್ತ ಸ್ಥಳಕ್ಕೆ ಬಂದಾಗ ಅವರಿಗೆ ನೀವು ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸಿರಿ" ಎಂದು ಹೇಳಿದನು (ಲೂಕ 22:40). ಆತನು ಮರಣಿಸಲಿಕ್ಕೆ ಇದ್ದಾಗ್ಯೂ, ತನಗಾಗಿ ಪ್ರಾರ್ಥಿಸಲು ಅವರಿಗೆ ಹೇಳಲಿಲ್ಲ. ಆದರೆ ತಮಗಾಗಿ (ಅವರಿಗಾಗಿ) ಪ್ರಾರ್ಥಿಸಲು ಹೇಳಿದನು. "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು" ಎಂದು ಅವರನ್ನು ಒತ್ತಾಯಿಸಿದನು (ಮತ್ತಾಯ 26:41). ಕಷ್ಟಗಳು ಅವರ ಮೇಲೆ ಬರುವವು ಎಂದು; ಅವರು ವಿಜಯಶಾಲಿಗಳಾಗಬೇಕಾದರೆ ಅವರಿಗೆ ಪ್ರಾರ್ಥನೆಯು ಅವಶ್ಯವೆಂದು ಆತನು ಬಲ್ಲವನಾಗಿದ್ದನು.

ನೀವು ನಿರಾಶೆಯ, ಹತಾಶೆಯ, ಅಥವಾ ಪರಿತ್ಯಾಗದ ಗೆತ್ಸೆಮನೆಯಲ್ಲಿ ಇದ್ದೀರಾ ಇದನ್ನು ಒಂದು ಸ್ಥಳವನ್ನು ಆಗಿಸಿರಿ.[27] ಸಮಸ್ಯೆಯಿಲ್ಲದಿರುವುದು ಎಷ್ಟು ದೊಡ್ಡದೆಂದರೆ ಸಹಾಯಕ್ಕಾಗಿ ದೇವರನ್ನು ಹತ್ತಿರಕ್ಕೆ ಎಳೆಯದಿರುವುದೇ ಆಗಿದೆ.

**ನಿವೇದನೆಯ ಸ್ಥಳ**

ಗೆತ್ಸೆಮನೆಯನ್ನು ಪ್ರಾರ್ಥನೆಯ ಸ್ಥಳವಾಗಿ ಸೇರಿಸುವಂತೆಯೇ ಇದು ನಿವೇದನೆಯ ಸ್ಥಳವೂ ಆಗಿದೆ. (ಇದೊಂದು ಮೂಲ ಸತ್ಯವಾಗಿದೆ.) "ನಾನು ನನ್ನ ಚಿತ್ತದಂತೆ ನಡೆಯುವುದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿದಾತನ ಚಿತ್ತವನ್ನೂ ನೆರವೇರಿ ಸುವುದಕ್ಕೆ ಪರಲೋಕದಿಂದ ಬಂದೆನು" ಎಂದು ಯೇಸು ಹೇಳಿದನು (ಯೋಹಾನ 6:38; ನೋಡಿರಿ ಇಬ್ರಿಯ 10:7, 9). "ನಿನ್ನ ಚಿತ್ತವು ನೆರವೇರಲಿ" ಎಂದು ಪ್ರಾರ್ಥಿಸಿರಿ ಎಂದು ಆತನು ತನ್ನ ಶಿಷ್ಯರಿಗೆ ಕಲಿಸಿದನು (ಮತ್ತಾಯ 6:10). ಈಗ, ಕರ್ತವ್ಯವು ಇಚ್ಛೆಯೊಡನೆ ಸಂಘರ್ಷಕ್ಕೆ ಇಳಿದಂತೆ, ಆತನು ತನ್ನದೇ ಆದ ನಿರ್ದೇಶನದಂತೆ ನಡೆದನು. ನಂತರ ಆತನು ಪ್ರಾರ್ಥಿಸುತ್ತಾ "ಸಾಧ್ಯವಾಗದಿದ್ದರೆ ಈ ಪಾತ್ರೆಯ ನನ್ನನ್ನು ಬಿಟ್ಟುಹೋಗಲಿ" ಎಂದು ಹೇಳಿ "ಹೇಗೂ ನನ್ನ ಚಿತ್ತವಲ್ಲ ನಿನ್ನ ಚಿತ್ತ" ಎಂದು ಸೇರಿಸಲು ಸಮರ್ಥನಾದನು (ಮತ್ತಾಯ 26:39).[28]

ಆ ಪ್ರಾರ್ಥನೆಯು ಕೇವಲ ವೇದನೆಯ ಅಭ್ಯಾಸವಾಗಿರಲಿಲ್ಲ, ಆದರೆ ಶರತ್ತಿನ ಅಭ್ಯಾಸ ವಾಗಿತ್ತು.[29] ಕ್ರಿಸ್ತನು ಪ್ರಾರ್ಥಿಸಿದ ಪ್ರತಿಸಾರಿ, ಆತನ ಚಿತ್ತವು ಆತನ ತಂದೆಯ ಚಿತ್ತದೊಡನೆ ಹತ್ತಿರವಾಗುತ್ತಾ ಸಾಗಿತು. "ಸಾಧ್ಯವಾಗದಿದ್ದರೆ ಈ ಪಾತ್ರೆಯ ನನ್ನನ್ನು ಬಿಟ್ಟು ಹೋಗಲಿ ಹೇಗೂ ನನ್ನ ಚಿತ್ತ ಚಿತ್ತವಲ್ಲ ನಿನ್ನ ಚಿತ್ತ" ಎಂದು ಆತನು ಮೊದಲು ಪ್ರಾರ್ಥಿಸಿದನು (ಮತ್ತಾಯ 26:39). ಎರಡನೆಯ ಸಾರಿ, "ನಾನು ಕುಡಿದ ಹೊರತು ಈ ಪಾತ್ರೆಯು ನನ್ನ ಬಿಟ್ಟುಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ" ಎಂದು ಪ್ರಾರ್ಥಿಸಿದನು (ಮತ್ತಾಯ 26:42). ಅಂತಿಮವಾಗಿ, ಆತನ ಪ್ರಾರ್ಥನೆಯ ಮೂರನೆಯ ಅವಧಿಯಲ್ಲಿ, "... ತಂದೆಯು

ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ?'' ಎಂದು ಹೇಳುವಷ್ಟು ಸಮರ್ಥನಾದನು (ಯೋಹಾನ 18:11). ಜನರ ಗುಂಪು ಯೇಸುವನ್ನು ಸೆರೆಹಿಡಿದಾಗ, ಆತನು ತಪ್ಪಿಸಿಕೊಳ್ಳುವುದರಿಂದ ತಡೆಯುವ ಹಗ್ಗದಂತೆ ಇರಲಿಲ್ಲ, ಆದರೆ ಇದು ದೇವರ ಚಿತ್ತವಾಗಿತ್ತು.

ಮುಂದಿನ ಸಾರಿ ನೀವು ನಿಮ್ಮ ಗೆತ್ಸೆಮನೆಯಲ್ಲಿ ಇರುವಾಗ, ಪ್ರಾರ್ಥಿಸಲು ಮರೆಯದಿರಿ. ನೀವು ಪ್ರಾರ್ಥಿಸುತ್ತಿರುವಂತೆಯೇ "ನನ್ನ ಚಿತ್ತವಲ್ಲ ನಿನ್ನ ಚಿತ್ತದಂತೆಯೇ ಆಗಲಿ'' ಎಂದು ಹೇಳಿರಿ - ಮತ್ತು ಅದನ್ನು ಅರ್ಥೈಸಿಕೊಳ್ಳಿರಿ. ದೇವರ ಚಿತ್ತವು ಭಾರವನ್ನು ಹಗುರಾಗಿ ಸದಿದ್ದರೆ ಯಾವುದೇ ಭಾರವಾದ ನಿವೇದನೆಯು ಹೊರೆಯಾಗಿರದೆ ಇರದು.

**ಬಲಪಡಿಸುವ ಸ್ಥಳ**

ಅಂತಿಮವಾಗಿ, ಗೆತ್ಸೆಮನೆ ತೋಟವು ಬಲಪಡಿಸುವ ಸ್ಥಳವಾಗಿತ್ತು ಎಂಬುದರತ್ತ ನಮ್ಮ ಲಕ್ಷವನ್ನು ನಾನು ತರುವವನಾಗಿದ್ದೇನೆ. ಇಬ್ರಿಯ ಪುಸ್ತಕದ ಲೇಖಕನು "... ಆತನು ಪ್ರಾರ್ಥನೆ ವಿಜ್ಞಾನೆಗಳನ್ನು ಸಮರ್ಪಿಸಿ *ಕೇಳಲ್ಪಟ್ಟನು*'' ಎಂದು ಬರೆಯುತ್ತಾನೆ (ಇಬ್ರಿಯ 5:7; ಒತ್ತಿ ಹೇಳಿದ್ದು ನನ್ನದು). ಆತನ ಪ್ರಾರ್ಥನೆಗೆ ಪ್ರತ್ಯುತ್ತರವಾಗಿ "ಪರಲೋಕದಿಂದ ಬಂದ ಒಬ್ಬ ದೇವದೂತನು ಕಾಣಿಸಿಕೊಂಡು ಆತನನ್ನು ಬಲಪಡಿಸಿದನು''[30] (ಲೂಕ 22:43).

ಆ ಸಮಯದಿಂದ ಕ್ರಿಸ್ತನು ತನ್ನ ಪ್ರಾರ್ಥನೆಯನ್ನು ಮುಗಿಸಿದನು, ಆತನ ಆಂತರಿಕ ಹೋರಾಟವು ಮುಕ್ತಾಯವಾಯಿತು; ಮುಂದಿರುವ ಕಠಿಣಪರೀಕ್ಷೆಗೆ ಆತನು ಸಿದ್ಧನಾದನು. "ಆತನು ತನ್ನ ಕೈಯನ್ನು ಮುಂದುಮಾಡಿ ತನ್ನನ್ನು ಮುರುಟಿಸಲಿರುವ ಬಟ್ಟಲನ್ನು ತೆಗೆದುಕೊಂಡನು''[31] (ನೋಡಿರಿ ಯೋಹಾನ 18:11). "ತಂದೆಯ ಕೈಯಲ್ಲಿ ಏನೇ ಇರಲಿ, ಇದು ಎಷ್ಟೇ ಕಹಿಯಾಗಿದ್ದರೂ ಸರಿ, ಅದು ಲೋಕದ ಕೈಯಲ್ಲಿ ಎಷ್ಟೇ ಸಿಹಿಯಾಗಿರುವದಕ್ಕಿಂತಲೂ ಉತ್ತಮವಾದದ್ದಾಗಿದೆ.''[32]

ಆತನು ತನ್ನ ಶಿಷ್ಯರಿಗೆ "ನೀವು ಇನ್ನು ನಿದ್ರೆಮಾಡಿ ದಣುವಾರಿಸಿಕೊಳ್ಳಿರಿ; ಇಗೋ, ಗಳಿಗೆಯು ಸಮೀಪಿಸಿತು, ಈಗ ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ ಹೋಗೋಣ'' ಎಂದು ಹೇಳಿದನು (ಮತ್ತಾಯ 26:45ಬಿ, 46ಎ). ಆತನನ್ನು ಹಿಡಿಯಲು ಬಂದವರು ಆತನು ಓಡಿಹೋಗುತ್ತಾನೆ ಎಂದು ತಿಳಿದುಕೊಂಡಿದ್ದರು; ಬದಲಾಗಿ, ಆತನು ಧೈರ್ಯವಾಗಿ ಅವರನ್ನು ಭೇಟಿಯಾಗಲಿ ಹೆಜ್ಜೆಹಾಕಿದನು (ನೋಡಿರಿ ಯೋಹಾನ 18:4).

ಆ ಕ್ಷಣದಿಂದ "ಅಲ್ಲಿ [ಜನಜಂಗುಳಿಯಲ್ಲಿ] ಆತನು ಮಾತ್ರ ಶಾಂತತೆಯಿಂದ ತುಂಬಿದ ವ್ಯಕ್ತಿಯಾಗಿದ್ದನು ... ಆತನು ಈ ಎಲ್ಲಾ ದ್ರಷ್ಯಗಳ ಮೂಲಕ ಸಮಾಧಾನದ, ಸಮಸ್ಥಿತಿಯುಳ್ಳ ಮತ್ತು ಘನತೆಯ ಜೊತೆ ಸಾಗಿದ್ದು ಅದೇ ಆ ಸಮಯದ ಅದ್ಭುತವಾಗಿತ್ತು.''[33] ಬಲಿಪಶು ಆಗುವ ಬದಲು "ಆತನು ವಿಜಯಶಾಲಿಯಾದನು.''[34] ಸಂಘರ್ಷದ ಸಮರ ಭೂಮಿಯಲ್ಲಿ, ಕ್ರಿಸ್ತನೇ ವಿಜಯಶಾಲಿಯಾದನು.

ನೀವು ನಿಮ್ಮ ಗೆತ್ಸೆಮನೆಯಲ್ಲಿರುವಾಗ, ಬಲಕ್ಕಾಗಿ ಕರ್ತನೆಡೆಗೆ ನೋಡಿರಿ. ಶಕ್ತಿಯನ್ನು ಮೀರುವ ಶೋಧನೆಗಳನ್ನು ನಿಮಗೆ ಸಹಿಸಿಕೊಳ್ಳಲು ಶಕ್ತರಾಗುವಂತೆ ದೇವರು ಸಹಾಯಮಾಡದೆ ಇರನು (1 ಕೊರಿಂಥ 10:13; ಇಬ್ರಿಯ 13:5).

## ಮುಕ್ತಾಯ

ಗೆತ್ಸೆಮನೆ - ಇಲ್ಲಿ ಯಾವುದನ್ನು ಇರಿಸಲು ಇಡಬೇಕು ಎಂಬುದನ್ನು ನಾವು ಇದನ್ನು ವ್ಯಕ್ತಪಡಿಸಲು, ಕಡಿಮೆಯಾಗಿ ವಿವರಿಸಲು ನಮಗೆ ಬೇರೆ ಬೇರೆ ಯಾವ ಮಾರ್ಗವೇ ಇಲ್ಲ. ಇದು ಹತಾಶೆಯ, ನಿರಾಶೆಯ ಸ್ಥಳ, ಪರಿತ್ಯಾಗದ ಸ್ಥಳ ಎಂದು ನಾವು ಬಲ್ಲವರಾಗಿದ್ದೇವೆ. ಈ

ಅಂಶಗಳಿಂದ, ನಾವು ಏನನ್ನು ಸಹಿಸಬಹುದೆಂದು ಯೇಸು ತಿಳಿದವನೂ ಮತ್ತು ಅರಿತವನೂ ಆಗಿದ್ದಾನೆ ಎಂದು ನಾವು ಕಲಿತ್ತಿದ್ದೇವೆ. ಹೇಗೂ, ಆ ತೋಟವು ಪ್ರಾರ್ಥನೆಯ, ನಿವೇದನೆಯ ಮತ್ತು ಬಲಪಡಿಸುವ ಸ್ಥಳವೂ ಸಹ ಆಗಿದೆ. ಈ ಸತ್ಯಗಳು ವಿಜಯದ ಮಾರ್ಗವು ನಿವೇದನೆ, ದೇವರ ಚಿತ್ತದ ನಿವೇದನೆ ಆಗಿದೆ. ಎಂದಿಗೂ ಎದುರಿಸಲಾಗದ ನಮ್ಮಲ್ಲಿ ಯಾರಿಗಾದರೂ ಕಷ್ಟದ ಕಾರ್ಯವೆಂದರೆ ದೇವರ ಚಿತ್ತದೊಡನೆ ನಮ್ಮ ಚಿತ್ತವನ್ನು ಸರಿದೂಗಿಸದೆ ಇರುವುದೇ ಆಗಿದೆ; ಆದರೆ ಅದನ್ನೇ ಹೀಗೆ ಯೇಸು ತನ್ನ ಜಯವನ್ನು ಗಳಿಸಿದನು ಮತ್ತು ಹಾಗೆಯೇ ನಾವು ನಮ್ಮ ಚಿತ್ತವನ್ನು ಗೆಲ್ಲಬೇಕಾಗಿದೆ.

ನಮ್ಮ ಚಿತ್ತವನ್ನು ಸಮರ್ಪಿಸುವುದರ ಬಗ್ಗೆ ಮಾತನಾಡುತ್ತಾ, ಕ್ರೈಸ್ತನಾಗಿರುವುದಕ್ಕಾಗಿ ಮತ್ತು ನಂಬಿಗಸ್ತ ಕ್ರಿಸ್ತೀಯ ಜೀವಿತದಲ್ಲಿ ಜೀವಿಸುವುದಕ್ಕಾಗಿ ದೇವರ ಆಜ್ಞೆಗಳಿಗೆ ವಿಧೇಯವಾಗಿ ಇದ್ದಿರಬಹುದಲ್ಲವೇ. ನೀವು ಪ್ರಾಯಶ್ಚಿತ ಪಡುವ ಪಾಪಿಯಂತೆ ವಿಶ್ವಾಸಿಯಾಗಿದ್ದು ಕ್ರಿಸ್ತನಲ್ಲಿ ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿಸುವ) ಪಡೆದಿದ್ದೀರೀ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; ಗಲಾತ್ಯ 3:26, 27)? ಕರ್ತನ ಚಿತ್ತದಂತೆ ಜೀವಿಸುವ ಜೀವಿತವನ್ನು ನೀವು ಜೀವಿಸಿದ್ದೀರಾ? ಆತನೆಡೆದೆ ಮರಳುವ ಅವಶ್ಯಕತೆಯ ನಿಮಗಿರುವುದಾದರೆ ಅದನ್ನು ಮಾಡಿರಿ ಇಂದೇ ಮಾಡಿರಿ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16).

ನನಗೆ ಚಿರಪರಿಚಿತವಿರುವ ಓಕ್ಲಹೋಮಾ ಪಟ್ಟಣವನ್ನು ಟೊರ್ನಡೋ ಚಂಡಮಾರುತವು 2001 ವಸಂತ ಕಾಲದಲ್ಲಿ ಹೊಡೆಯಿತು. ನಾನು ಮತ್ತು ನನ್ನ ಹೆಂಡತಿ ಅಲ್ಲಿದ್ದೆವು ನಮ್ಮ ಕುಟುಂಬವು ಇನ್ನೂ ಅಲ್ಲೇ ಅದೆ. ಟೋರ್ನಡೋ ಚಂಡಮಾರುತವು ಒಬ್ಬ ಮನುಷ್ಯನ ಮನೆಯ ಮೇಲೆ ಘರ್ಜಿಸಿದಾಗ ಆತನು "ಓ ಕರ್ತನೇ ನಾನು ಸಿದ್ಧನಾಗಿಲ್ಲ" ಎಂದು ಕೂಗಿಕೊಂಡಿದ್ದನ್ನು ಒಂದು ಸುದ್ದಿ ಸಮಾಚಾರವು ವರದಿಮಾಡಿತ್ತು. ಯಾವುದೇ ಕ್ಷಣದಲ್ಲಿ ದುರುಂತವು ಹೊಡೆದಾಗ ನೀನು ಸಿದ್ಧನಾಗಿರಬಲ್ಲೆಯಾ? ನೀನು ಸಿದ್ಧನಾಗಿಲ್ಲವಾದರೆ, ಸಿದ್ಧನಾಗಿರುವದಕ್ಕಾಗಿ ಇಂದೇ ದಯಮಾಡಿ ಕಾರ್ಯಪ್ರವೃತ್ತನಾಗಿರು!

## ಮಾಹಿತಿ

ಇದು ಯೇಸು ಗೆತ್ಸೆಮನೆಯಲ್ಲಿರುವದರ ಮೇಲೆ ಉನ್ನತವಾಗಿ ರೂಪಿತವಾದ ಪ್ರಸಂಗವಾಗಿದೆ. ಚಾರ್ಟಿನಲ್ಲಿರುವಂತಹ, ದೃಕ್ ಶ್ರಮಣದ ಮಂಡನೆಯಂತೆ, ಅಥವಾ ಪಾವರ್ ಪಾಯಿಂಟ್ ಮಂಡನೆಯಂತೆ ಇದು ತಾನೇ ದೃಶ್ಯ ಮಂಡನೆಗೆ ಪೂರಕವಾದ ವಿಷಯವು ಅಗಿದೆ. ಇದು ಜಾನ್ ಗಿಪ್ಸನ್‌ಲಿಂದ ಈ ಸರಳವಾದ ವಿಧಾನವು ಮಂಡನೆಗಾಗಿ ಹಾರ್ಡಿಂಗ್ ಯುನಿವರ್ಸಿಟಿಯ ಉಪನ್ಯಾಸದಲ್ಲಿ ಬಳಸಲ್ಪಟ್ಟಿತು. ಆತನು ಅಲ್ಲಿ ಮೂರು ಶಿರ್ಷಿಕೆಗಳನ್ನು ಹೊಂದಿದ್ದರು: ದುಃಖ ಏಕಾಂತತೆ, ವಿಜ್ಞಾಪನೆ. ಈ ಪುಸ್ತಕದಲ್ಲಿ ಸಿಕ್ಕುವ ಗೆತ್ಸೆಮನೆಯ ವೃತ್ತಾಂತವು ಸಹ ಕಥಾತ್ಮಕ ವಿಧಾನಕ್ಕೆ ಸ್ವಾಭಾವಿಕವಾದದ್ದು ಆಗಿದೆ. "ಗೆತ್ಸೆಮನೆಯ ತೋಟ": ಎಂಬ ಕಥಾತ್ಮಕ ವಿಧಾನವಾದ ಉಪಲೇಖನವನ್ನು ನೋಡಿರಿ.

---

ಟಿಪ್ಪಣಿಗಳು

[1]"ಪರದೈಸು" ಗ್ರೀಕ್ ಪದದ ಭಾಷಾಂತರದ ಪದವಾಗಿದ್ದು ಇದರ ಅರ್ಥ "ತೋಟ," "ತೋಪು," ಅಥವಾ "ಅಡವಿ" ಎಂದಾಗಿದೆ. ಇದು ಯಾವಾಗಲು "ಅಲ್ಹಾದಕರವಾದ ತೋಟದ" ಅರ್ಥದಲ್ಲಿ ಬಳಸಲ್ಪಡುತ್ತದೆ, (*The Analytical Greek Lexicon* [London: Samuel Bagster & Sons, Ltd., 1971], 302.) [2]D. W. Cleverley Ford, *Preaching Through the Life of Christ* (Peabody, Mass.: Hendrickson Publications, 1994), 76. [3]ಕೆಲ ಇನ್ನಿತರ ಸಂದರ್ಭಗಳು ಅಂದರೆ ಯೇಸು ದೈಹಿಕವಾಗಿ ಹಸಿವನ್ನು ಅನುಭವಿಸಿದ್ದು (ಮತ್ತಾಯ 4:2; 21:18) ಮತ್ತು ನೀರಡಿಸಿದ್ದು (ಯೋಹಾನ 4:7; 19:28); ಮನದಲ್ಲಿ ಬರುತ್ತದೆ ಆದರೆ ಇನ್ನಿತರ ಯಾವ ಸಂದರ್ಭಗಳೂ ಇದರ ಹಾಗೆ

ಸ್ಫುಟವಾಗಿಯೂ ಮತ್ತು ಕಂಡುಬರುವಂತವೂ ಇಲ್ಲ. [4]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠದಲ್ಲಿ ಅವತರಿಸುವಿಕೆಯನ್ನು ಟಿಪ್ಪಣೆಗಳನ್ನು ನೋಡಿರಿ. [5]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 686–87. [6]ನಾವು ಯೇಸುವಿನ ದೈವತ್ವದ ಜೊತೆ ಆತನ ಮಾನವತ್ವದ ರಹಸ್ಯಗಳ ಲೋಕವನ್ನು ಪ್ರವೇಶಿ ಸಿದ್ದರಿಂದ ರವರ ಹೇಳಿಕೆಯು ಮತ್ತು ನನ್ನ ಹೇಳಿಕೆಗಳು ಅವಶ್ಯವುಳ್ಳವುಗಳೂ ನಿರ್ಮಿತವಾದವುಳ್ಳವೂ ಆಗಿವೆ. ಕೆಲವರು ನಮ್ಮದನ್ನು ಒಪ್ಪುವವರಾಗಿದ್ದಾರೆ; ಕೆಲವರು ಒಪ್ಪರು. ಈ ನಿರ್ಧಿಷ್ಟ ಸಂಗತಿಯನ್ನು ನೀವು ಒಪ್ಪಿರಿ ಬಿಡಿರಿ ಅದು ಮಹತ್ವವಲ್ಲದ್ದು ಆಗಿದೆ; ನಿಮ್ಮ ಸ್ವಂತದ ಯೋಚನೆಯನ್ನು ಬಲಪಡಿಸುವ ಅಂಶವನ್ನು ನಾನು ಮಂಡಿಸುತ್ತೇನೆ. [7]ಈ ಪ್ರಸಂಗದ ಪಾಠವು ಇದರ ಸಮಯವನ್ನು ತೆಗೆದುಕೊಂಡಾದ ಮೇಲೆ ಬೋಧಿಸಲ್ಪಟ್ಟಿದ್ದಾದರೆ, ಅಲ್ಪವಾದ ಅಥವಾ ಹಿನ್ನಲೆಯಿಲ್ಲದ ಮಾಹಿತಿಯು ಅವಶ್ಯವಿರುವುದಾಗಿದೆ. ಯೇಸು ಮತ್ತು ಶಿಷ್ಯರು ತೋಟಕ್ಕೆ ಹೋಗುವುದರ ಬಗೆಗಿನ ವಿವರಗಳನ್ನು ನೀವು ಪುನರಾವರ್ತಿಸಬಹುದು. [8]ಈ ಪ್ರಸಂಗ ಬೋಧಿಸುವಲ್ಲಿ, "ನಿಮ್ಮ ವಾಚನ್ನು ಪರೀಕ್ಷಿಸಬೇಡಿರಿ ಮತ್ತು ಚಿಂತಿಸಲು ಆರಂಭಿಸಿ. ಉಳಿದ ಸಂಗತಿಗಳನ್ನು ನಾನು ಹೆಚ್ಚು ಕಡಿಮೆ ಬೇಗನೇ ಮುಗಿಸುವೆನು" ಎಂದು ಮುಗುಳ್ನಗುತ್ತಾ ಸೇರಿಸಬಹುದು. [9]ನಾವು ತಿಳಿದಂತೆ, ತೋಟದಲ್ಲಿನ ಈ ಸಂದರ್ಭದಲ್ಲಿ ಒಂದೇ ಸಾರಿ ಯೇಸು ಈ ನಿಖರವಾದ ಮಾತುಗಳನ್ನು ಮಾತನಾಡಿದ್ದಾನೆ, ಆದರೆ ಈ ವಿಚಾರವು ಆತನ ಮನದ ಮೂಲಕ ಹಾದುಹೋಯಿತು (ನೋಡಿರಿ ಯೋಹಾನ 12:27, 28). [10]ಕೊನೆಯ ಪಾಠದಲ್ಲಿರುವ "ಬಟ್ಟಲು" ಮೇಲಿನ ಟಿಪ್ಪಣೆಯನ್ನು ನೋಡಿರಿ.

[11]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಯೆಹೂದಿಗಳ ಹಬ್ಬಗಳ ಪಟ್ಟಿಯನ್ನು ನೋಡಿರಿ. [12]ಈ ಸ್ಥಿತಿಯನ್ನು hematidrosis or hemohidrosis ಎಂದು ಕರೆಯುತ್ತಾರೆ. (William D. Edwards, Wesley J. Gabel, and Floyd E. Hosmer, "On the Physical Death of Jesus Christ," *Journal of the American Medical Association* (21 March 1986): 1456. ಯೇಸು ಕ್ರಿಸ್ತನ ಜೀವಿತದ ಮೇಲಿನ ಒಂದು ದೂರದರ್ಶನದ ಡಾಕುಮೆಂಟ್ರಿಯು ಈ ಸ್ಥಿತಿಗಳ ಚರ್ಚೆಯನ್ನು ಒಳಗೊಂಡಿದೆ. (December 2001) ಅಲ್ಲಿ ಲಂಡನ್ನಿನಲ್ಲಿ ವಾಸಿಸುತ್ತಿದ್ದ ಒಬ್ಬ ಯೌವನಸ್ಥೆಯ ಉದಾಹರಣೆಯು ಕೊಡಲ್ಪಟ್ಟಿದೆ II, ನೇಯ ಮಹಾಯುದ್ಧದ ಆರಂಭದಲ್ಲಿ ಪಟ್ಟಣದಲೆಲ್ಲೆ ರಾತ್ರೋರಾತ್ರಿ ಬಾಂಬುಗಳು ಬೀಳುತ್ತಿದ್ದವು. ಪ್ರತಿಯೊಂದು ಬಾಂಬು ಬಿದ್ದಾಗಲೂ ರಕ್ತವು ಅವಳ ಹಣೆಯಲ್ಲಿ ಜಿನುಗುತ್ತಿತ್ತು. [13]ಮತ್ತಾಯ 16:21; 17:22, 23; 20:17-19. [14]ಯೇಸುವಿನ ಹಿಂದಿನ ಉದ್ಘೋಷಣೆಯು ಖಚಿತ ವಾಗಿ ಆತನ ಮಾತಿನ ಅರ್ಥವನ್ನು ಅರಿಯದಿದ್ದರೂ ಕೂಡಾ ಅದು ಆತನ ಶಿಷ್ಯರಲ್ಲಿ ದುಖವನ್ನು ತುಂಬಿತ್ತು (ನೋಡಿರಿ ಮತ್ತಾಯ 17:22, 23; ಲೂಕ 18:31-34). ಬಹುಶಃ ತನ್ನ ಮರಣದ ಬಗ್ಗೆ ಆತನು ಮಾತನಾಡಿದ ರೀತಿಯು ಆತನು ಹೇಳಿದ್ದಕ್ಕಿಂತಲೂ ಹೆಚ್ಚಾಗಿ ಅವರ ಮೇಲೆ ಪರಿಣಾಮ ಬೀರಿತು. ಆತನ ಮರಣದ ಬಗೆಗಿನ ಒಂದಾದರೂ ಹಿಂದಿನ ಆಧಾರವು ಒಳ ಹೋರಾಟವನ್ನು ಸೂಚಿಸುತ್ತದೆ (ನೋಡಿರಿ ಯೋಹಾನ 12:27, 28). [15]ಅದು ಆತನ ತನ್ನ "ಕಾರ್ಯದ" (ಸೇವೆಯ) ಇಹಲೋಕದ ಭಾಗವನ್ನು ಕೊನೆಗೊಳಿಸುತ್ತಾ ಇದ್ದಾನೆ. [16]ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ತುತ್ತುರಿ ಅಥವಾ ವಿಪತ್ತೂ?" ಎಂಬ ಪಾಠವನ್ನು ನೋಡಿರಿ. [17]John D. Gipson, "Agony in Gethsemane," *Harding University Lectures* (1988), 155. [18]Gipson, 155. [19]Edwards, Gabel, and Hosmer, 1458. ಇದಕ್ಕೆ ಜೋಡಿಸಲ್ಪಟ್ಟ ಆಧಾರಗಳು ಕ್ರೂಜಿಸುವದರ ಬಗೆಗೆ ಇರುವ ಅವಮಾನ ಅಂದರೆ ಅಪಾದಿತನ ಮೇಲಿನ ಬಟ್ಟೆಗಳನ್ನು ಕಸಕೊಳ್ಳುವುದೇ ಆಗಿದೆ; ದೇವವಾಕ್ಯದಲ್ಲಿ ಬೆತ್ತಲೆಯಾಗಿರುವದು ಅವಮಾನಕರವಾದದ್ದು ಆಗಿದೆ (ಯೆಶಾಯ 20:4; ಪ್ರಕಟಣೆ 16:15; ಹೋಲಿ ಸಿರಿ ಆದಿಕಾಂಡ 2:25 ಇದರೊಡನೆ 3:8, 10). [20]Donald G. Miller, *Luke*, Layman's Bible Commentary (Atlanta: John Knox, 1959), 155.

[21]ಗಿನ್ನಿಸ್ ದಾಖಲೆಯ ಪುಸ್ತಕವು ವಿವಿಧ ರೀತಿಯ ಚಟುವಟಿಕೆಗಳ ಪ್ರಚಲಿತ ದಾಖಲೆಯನ್ನು ಇಡುವ ಪಟ್ಟಿಯಾಗಿದೆ. [22]ಸಮಸ್ಯೆಗಳ ಸಮಯದಲ್ಲಿ ನಿಮಗೆ ಸಂಗಾತಿಯ ಅವಶ್ಯಕತೆಯ ಅನುಭವವಾಗಿರುವ ವೈಯಕ್ತಿಕ ದೃಷ್ಟಾಂತಗಳನ್ನು ಇಲ್ಲಿ ಇರಿಸಬಹುದು. [23]ಹೇಗೋ ಆತನು ದೇವರಿಂದ ಬಿಡಲ್ಪಟ್ಟಿರಲಿಲ್ಲ, ಆದರೆ ಇದು ನಂತರ ಈ ಪ್ರಸಂಗದಲ್ಲಿ ಇರಿಸಲ್ಪಟ್ಟಿದೆ. [24]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಸಿಕ್ಕುವ "ಲೂಕನ ಪುಸ್ತಕ" ಎಂಬ ಪಾಠವನ್ನು ನೋಡಿರಿ. [25]ಯೆಹೂದಿ ಸಾಹಿತ್ಯದಲ್ಲಿ, ಯಾರಾದರೂ ಯೇಸುವಿಗಿಂತ ಮೊದಲು ದೇವರನ್ನು "ಅಪ್ಪಾ" ಎಂದು ಕರೆದ ದಾಖಲೆಯು ಇಲ್ಲ. "ಅಪ್ಪಾ" ಎಂಬ ಪದವು ರೋಮಾಪುರದವರಿಗೆ ಬರೆದ ಪತ್ರಿಕೆ 8:15 ಮತ್ತು ಗಲಾತ್ಯ 4:6ರಲ್ಲಿ ಸಹ ಸಿಕ್ಕುವುದಾಗಿದೆ. [26]"ತಂದೆ" ಎಂಬ ಪದಕ್ಕಾಗಿ ನೀವಿರುವ ಪ್ರದೇಶದಲ್ಲಿನ ಪದವನ್ನು ಬಳಸಿರಿ. [27]ಈ

ಪ್ರಸಂಗದಲ್ಲಿ ಸೇರಿಸಲ್ಪಟ್ಟ ಹೆಚ್ಚಾದ ಬಹುದು ಮತ್ತು ಆಗಲೇ ಬೇಕು, ಎಂಬ ಪದಗಳು ಕಷ್ಟದ ಸಮಯದಲ್ಲಿ ಅವಶ್ಯವಾದ ಪ್ರಾರ್ಥನೆಯ ಬಗೆಗೆ ಇವೆ. ದೊಡ್ಡ ವಿಪತ್ತಿನ ಸಮಯದಲ್ಲಿ ನೀವು ಪ್ರಾರ್ಥಿಸಿದಾಗ ದೇವರು ನಿಮ್ಮನ್ನು ಕಾಪಾಡಲು ಸಹಾಯಿಸಿದ್ದನ್ನು ಬಹುಶಃ ನೀವು ಇಲ್ಲಿ ಹೇಳಬಹುದು. [28]ಈ ಪ್ರಸಂಗವನ್ನು ಪ್ರಸಂಗಿಸುವಾಗ, ಯೇಸುವಿನ ನಿವೇದನೆಯ ಬಗೆಗೆ ನನಗೆ ಹೇಳಲು ಹೆಚ್ಚೇನೂ ಇಲ್ಲ. [29]Rick Atchley, "Rematch in the Garden," sermon preached at the Southern Hills church of Christ, Abilene, Texas, 25 March 1984 ರಿಂದ ತೆಗೆದುಕೊಂಡಿದ್ದಾಗಿದೆ. [30]ದೇವರು ಆ ಬಟ್ಟಲನ್ನು ತೆಗೆದುಹಾಕಲಿಲ್ಲ, ಆದರೆ ಅದನ್ನು ಸಹಿಸಿಕೊಳ್ಳುವ ಬಲವನ್ನು ಆತನು ಯೇಸುವಿಗೆ ಕೊಟ್ಟನು. ಹಲವು ಬಾರಿ, ನಾವು ದೇವರಿಗೆ ಪ್ರಾರ್ಥಿಸುತ್ತಿರುವಾಗ, ಆತನು ನಮ್ಮ ಕಷ್ಟಗಳನ್ನು ತೆಗೆದುಹಾಕುವುದಿಲ್ಲ, ಬದಲಾಗಿ ಅದನ್ನು ತಾಳಿಕೊಳ್ಳುವ ಶಕ್ತಿಯನ್ನು ಆತನು ನಮಗೆ ಕೊಡುತ್ತಾನೆ. ಈ ರೀತಿಯಲ್ಲಿ ಅದೇ ರೀತಿಯ ಕಷ್ಟಗಳನ್ನು ಎದುರಿಸಲು ನಾವು ಇತರರಿಗೆ ಸಹಾಯಿಸಲು ಆತನು ನಮ್ಮ ಶಕ್ತರನ್ನಾಗಿಸುತ್ತಾನೆ (ನೋಡಿರಿ 2 ಕೊರಿಂಥ 1:4).

[31]Gipson, 158. [32]Atchley. [33]H. I. Hester, *The Heart of the New Testament* (Liberty, Mo.: Quality Press, 1963), 204. [34]Ibid. [35]John D. Gipson, "Agony in Gethsemane," *Harding University Lectures* (1988), 154–58.